# ಕರ್ನಾಟಕ ಆಯವ್ಯಯ 2006 – 07

## ಪಕ್ಷಿ ನೋಟ

### ಸಾಮಾನ್ಯ

- L ನೂತನ ಮೈತ್ರಿಕೂಟ ಸರ್ಕಾರದ ಮೊದಲ ಮುಂಗಡ ಪತ್ರ.
- L ಕರ್ನಾಟಕದ ಅಭಿವೃದ್ಧಿಗಾಗಿಯೇ ರಚಿತವಾಗಿರುವ ಸರ್ಕಾರ.
- L ಕರ್ನಾಟಕದ ಸರ್ವಾಂಗೀಣ ಅಭಿವೃದ್ಧಿಯೇ-ನಮ್ಮ ಗುರಿ.
- L ಸ್ವಚ್ಛ, ದಕ್ಷ ಹಾಗೂ ಕಾಳಜಿ ಸಹಿತ ಆಡಳಿತ-ನಮ್ಮ ದಾರಿ.
- L ಸರ್ವರಿಗೂ ಸಮಬಾಳನ್ನೀಯುವ ಸಾಮಾಜಿಕ ನ್ಯಾಯ-ನಮ್ಮ ದಿಕ್ಸೂಚಿ.
- L ಕರ್ನಾಟಕದ ನಾಗರೀಕರಿಗೆ ಶಾಂತಿ, ಸಮೃದ್ಧಿ ಮತ್ತು ಸಂತೃಪ್ತಿಯ ಭರವಸೆ.
- L ಕೋಮು ಸೌಹಾರ್ದತೆ ಮತ್ತು ಸಾಮಾಜಿಕ ನ್ಯಾಯದ ತಳಹದಿಯ ಮೇಲೆ ರಾಜ್ಯದ ಸಮಗ್ರ ಅಭಿವೃದ್ಧಿ.
- L ಕನ್ನಡ ನಾಡು, ನುಡಿ, ಕಲೆ ಮತ್ತು ಜಲಸಂಪನ್ಮೂಲಗಳ ಸಂರಕ್ಷಣೆ.
- L ರೈತರು, ಪರಿಶಿಷ್ಟಜಾತಿ/ಬುಡಕಟ್ಟುಗಳು, ಹಿಂದುಳಿದ ಜಾತಿಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಕಲ್ಯಾಣ.
- L ಉತ್ತಮ ಗುಣಮಟ್ಟದ ಜೀವನ ಮತ್ತು ಬಂಡವಾಳ ಹೂಡಿಕೆಗೆ ಉತ್ತೇಜನ ನೀಡುವಂತಹ ಮೂಲಸೌಕರ್ಯಗಳ ಸಮರ್ಪಣೆ.

### ಆರ್ಥಿಕ ಪರಿಸ್ಥಿತಿ

- L ರಾಜ್ಯದ ಆರ್ಥಿಕತೆ 2005-06 ನೇ ಸಾಲಿನಲ್ಲಿ ಶೇ. 8.7 ರ ವೃದ್ಧಿ.
- L ಪ್ರಾಥಮಿಕ ವಲಯವು ಶೇ. 6.3 ರ ವೃದ್ಧಿ.
- L ಉತ್ಪಾದನಾ ವಲಯವು ಶೇ. 5.7ರ ವೃದ್ಧಿ.
- L ಸೇವಾವಲಯವು 11.2 ರ ದರದಲ್ಲಿ ವೃದ್ಧಿ.

- L ರಾಜ್ಯದ ಹಣದುಬ್ಬರವು ಶೇ. 4.4.
- L ರಾಷ್ಟ್ರೀಯ ಹಣದುಬ್ಬರ ಶೇ. 4.7.

## ವಿತ್ತೀಯ ಸುಧಾರಣೆ

- L ಸಂಪನ್ಮೂಲ ಸಂಗ್ರಹದಲ್ಲಿ ಹೆಚ್ಚಳ, ತೆರಿಗೆ ಸೋರಿಕೆಯಲ್ಲಿ ತಡೆ, ಶೇ. 5ರಷ್ಟು ಯೋಜನೇತರ ವೆಚ್ಚ ಕಡಿತ. ಮೈತ್ರಿಕೂಟ ಸರ್ಕಾರದ ಮೂರು ಮುಖ್ಯ ಆದ್ಯತೆಗಳು.
- L ನೂತನ ಪಿಂಚಣಿ ಪಾವತಿ ಯೋಜನೆ ನಿಗದಿತ ಕೊಡುಗೆ ಯೋಜನೆಗೆ ವರ್ಗಾವಣೆ ಆಶಯ.
- L ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಆಯವ್ಯಯ ನಿಯಂತ್ರಣ ಪದ್ಧತಿ ಜಾರಿ.
- L ಅನುದಾನಿತ ಶಿಕ್ಷಣ ಸಂಸ್ಥೆಗಳ ಮತ್ತು ವಸತಿ ಶಾಲೆಗಳ ಗುಣಮಟ್ಟ ಮರುಪರಿಶೀಲನೆಗೆ ನಿರ್ಧಾರ.
- L ಫಲಶ್ರುತಿ ಆಧರಿಸಿ ಅನುದಾನ ಬಿಡುಗಡೆಗೆ ಚಿಂತನೆ.
- L ನೋಂದಣಿ ಕಛೇರಿಯಲ್ಲಿ ಆಸ್ತಿ ಹಕ್ಕನ್ನು ಖಾತರಿಗೊಳಿಸುವ 'ಪ್ರಮಾಣ' ಹೆಸರಿನ ಯೋಜನೆ ಜಾರಿಗೆ ಚಿಂತನೆ.
- L ರಾಜ್ಯಕ್ಕೆ ಒಂದೇ ಇ-ಪ್ರೊಕ್ಯೂರ್‌ಮೆಂಟ್ ಕೇಂದ್ರದ ಸ್ಥಾಪನೆಗೆ ಚಾಲನೆ.
- L ಲಿಂಗ ಆಧಾರಿತ ಆಯವ್ಯಯ ಅಳವಡಿಕೆಗೆ ಚಿಂತನೆ.
- L ಹಣಕಾಸು ಇಲಾಖೆಯಲ್ಲಿ ಲಿಂಗ ಆಧಾರಿತ ಆಯವ್ಯಯ ಕೋಶದ ಸ್ಥಾಪನೆಗೆ ಕ್ರಮ.
- L ರಾಜಸ್ವ ಖಾತೆಯಲ್ಲಿ ಉಳಿತಾಯ. ವಿತ್ತೀಯ ಕೊರತೆ ನಿಯಂತ್ರಣದಲ್ಲಿ ಮುಂದಿನ ವರ್ಷ ಶೇ. 8 ವೃದ್ಧಿ ನಿರೀಕ್ಷೆ.
- L ಸಾರ್ವಜನಿಕ ವೆಚ್ಚದ ಹಂಚಿಕೆ ಮತ್ತು ದಕ್ಷತೆ ಸುಧಾರಣೆಗೆ ಕ್ರಮ.

**ರಾಜ್ಯದ ಹಣಕಾಸು**

- ಆಯವ್ಯಯ ಗುರಿಸಾಧನೆ. ರಾಜ್ಯದ ಸ್ವಂತ ತೆರಿಗೆಯಲ್ಲಿ ಹೆಚ್ಚಳ.
- ಪರಿಷ್ಕೃತ ಅಂದಾಜು 19505.80 ಕೋಟಿ ರೂ.
- ಆಯವ್ಯಯ ಅಂದಾಜು 18680.10 ಕೋಟಿ ರೂ.
- ವ್ಯಾಟ್ ಅನುಷ್ಠಾನದಿಂದ 1041 ಕೋಟಿ ರೂ. ನಷ್ಟ. ಈವರೆಗೆ ಕೇಂದ್ರದಿಂದ 251.6 ಕೋಟಿ ರೂ.ಗಳ ಪರಿಹಾರ. ಬಾಕಿ ಹಣ ಶೀಘ್ರದಲ್ಲಿ.
- ವಿತ್ತೀಯ ಕೊರತೆ ರಾಜ್ಯದ ಜಿಎಸ್‌ಪಿಟಿಯ ಶೇ. 3 ಕ್ಕಿಂತ ಕಡಿಮೆ.
- ಕೇಂದ್ರದ ವಿತ್ತೀಯ ಪ್ರೋತ್ಸಾಹ ಧನ 374 ಕೋಟಿ ರೂ.ಗಳ ನಿವ್ವಳ ಲಾಭ.

**ಸಹಕಾರ**

- ಸಹಕಾರಿ ಸಂಸ್ಥೆಗಳ ಮೂಲಕ ಶೇ.4 ರ ಬಡ್ಡಿ ದರದಲ್ಲಿ ಕೃಷಿ ಸಾಲ.
- ಬಡ್ಡಿ ಮನ್ನಾ ಅವಧಿ ವಿಸ್ತರಣೆ.
- ಸಹಕಾರಿ ಕ್ಷೇತ್ರದ ಎಲ್ಲಾ ಸದಸ್ಯರಿಗೆ ಯಶಸ್ವಿನಿ, ಆರೋಗ್ಯ ಯೋಜನೆ.

**ಕಂದಾಯ**

- ಕೃಷಿ ಕಾರ್ಮಿಕರಿಗೆ ಸುವರ್ಣ ಸುರಕ್ಷಾ ಯೋಜನೆ.
- ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರಸ್ತೆ ನಿರ್ವಹಣೆ ಮತ್ತು ಸುಧಾರಣೆಗೆ 50 ಲಕ್ಷ ರೂ.
- ಶಾಸಕರ ಕ್ಷೇತ್ರನಿಧಿ ಮುಂದುವರಿಕೆ.
- ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿಯ - 82 ಕೋಟಿ ರೂ. ಬಾಕಿ ಮನ್ನಾ.

- L ಭೂ ಖರೀದಿಗೆ ಹೆಚ್ಚಿನ ಅನುದಾನ.
- L ಅಂಗವಿಕಲರ ಮತ್ತು ವಿಧವೆಯರ ಮಾಸಾಶನ ಹೆಚ್ಚಳ.
- L ಪುರ ಯೋಜನೆಯ ಅನುಷ್ಠಾನ.
- L ಕರ್ನಾಟಕ ಸಂಸ್ಕೃತಿ ಸಂರಕ್ಷಣಾ ಪ್ರಾಧಿಕಾರದ ರಚನೆ.
- L ಬಸವ ಕಲ್ಯಾಣ ಮತ್ತು ಕಾಗಿನೆಲೆ ಕ್ಷೇತ್ರಗಳ ಅಭಿವೃದ್ಧಿಗೆ ಹೆಚ್ಚು ಹಣ.

**ಸಣ್ಣ ನೀರಾವರಿ**

- L ರಾಜ್ಯದ ಎಲ್ಲಾ ಕೆರೆಗಳ ಒತ್ತುವರಿ ತೆರವು, ಗಡಿ ಗುರುತಿಸಿ ರಕ್ಷಣೆಗೆ ಕ್ರಮ.

**ಕನ್ನಡ ಮತ್ತು ಸಂಸ್ಕೃತಿ**

- L ಬಸವ ಪುರಸ್ಕಾರ ಪ್ರಶಸ್ತಿ - 10 ಲಕ್ಷ ರೂ.
- L ದೇವರದಾಸಿಮಯ್ಯ ಪೀಠ ಸ್ಥಾಪನೆ.
- L ರಾಷ್ಟ್ರಕವಿ ಪ್ರಶಸ್ತಿ-ಸುವರ್ಣ ಕರ್ನಾಟಕ ವರ್ಷದಲ್ಲಿ ಪುನರಾರಂಭ.
- L ಜನರಲ್ ತಿಮ್ಮಯ್ಯನವರು ಹುಟ್ಟಿದ ಮನೆ ಸ್ಮಾರಕವಾಗಿ ಪರಿವರ್ತನೆ.
- L ಸುವರ್ಣ ಕರ್ನಾಟಕ ಆಚರಣೆಗೆ ಅದ್ದೂರಿಯ ಸಿದ್ಧತೆ.

**ನಗರ**

- L ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಆದ್ಯತೆ.

**ಭಾಗ್ಯಲಕ್ಷ್ಮಿ ಯೋಜನೆ**

- L ಬಡ ಕುಟುಂಬಗಳಲ್ಲಿ ಜನಿಸಿದ ಹೆಣ್ಣು ಮಕ್ಕಳ ಭವಿಷ್ಯದ ಭದ್ರತೆಗಾಗಿ ಭಾಗ್ಯಲಕ್ಷ್ಮಿ ಯೋಜನೆ.

- ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುವ ಹೆಣ್ಣು ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸಲು ಪ್ರೇರಣೆ.

**ಪ್ರಾಥಮಿಕ ಶಿಕ್ಷಣ**

- ಪ್ರತಿಭಾವಂತ ಹೆಣ್ಣು ಮಕ್ಕಳನ್ನು ಪ್ರೋತ್ಸಾಹಿಸಲು "ಕಿತ್ತೂರು ರಾಣಿ ಚೆನ್ನಮ್ಮ" ಪುರಸ್ಕಾರ.
- ಪ್ರತಿಭಾವಂತ ಬಡ ಕುಟುಂಬಗಳ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಶುಲ್ಕ ಉಚಿತ.
- ಸಾಹಸಿ ಮಕ್ಕಳಿಗೆ ಹೊಯ್ಸಳ ಹಾಗೂ ಕೆಳದಿ ಚೆನ್ನಮ್ಮ ಪ್ರಶಸ್ತಿಗಳು.

**ಉನ್ನತ ಶಿಕ್ಷಣ**

- ಹೊಸ ಪ್ರೌಢಶಾಲೆಗಳು, ಪದವಿಪೂರ್ವ ಕಾಲೇಜುಗಳು, ಪ್ರಥಮ ದರ್ಜೆ ಕಾಲೇಜುಗಳು ಮತ್ತು ಐಟಿಐಗಳ ಸ್ಥಾಪನೆ.

**ಮಹಿಳಾ ಮತ್ತು ಮಕ್ಕಳ ಕಲ್ಯಾಣ**

- ಪ್ರತ್ಯೇಕ ಗ್ರಾಮೀಣ ಕ್ರೀಡಾ ನಿಧಿ ಸ್ಥಾಪನೆ.
- ಮಹಿಳಾ ಸ್ವಸಹಾಯ ಗುಂಪುಗಳು ಉತ್ಪಾದಿಸುವ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ ವ್ಯವಸ್ಥೆ.

**ಕೃಷಿ**

- ಒಣಭೂಮಿ ಅಭಿವೃದ್ಧಿಗೆ 50 ಸಾವಿರ ಕೃಷಿ ಹೊಂಡಗಳ ನಿರ್ಮಾಣ.
- ರಾಜ್ಯದ ಪ್ರತಿ ಹೋಬಳಿಗೂ ಭೂಮಿ ಯೋಜನೆ ವಿಸ್ತರಣೆ.
- ಮಾರುಕಟ್ಟೆ ಮಧ್ಯ ಪ್ರವೇಶಕ್ಕೆ ಆವರ್ತ ನಿಧಿಯಲ್ಲಿ ಹೆಚ್ಚಳ.
- ಜೈವಿಕ ಇಂಧನದ ಅಭಿವೃದ್ಧಿಗೆ ಹೆಚ್ಚು ಅನುದಾನ.

**ಪಶು ಸಂಗೋಪನೆ**

- ದೇಸಿ ಗೋತಳಿ ಸಂರಕ್ಷಣೆಗೆ ಆದ್ಯತೆ.

**ತೋಟಗಾರಿಕೆ**

- ತೋಟಗಾರಿಕೆ ಉತ್ಪನ್ನಗಳ ರಫ್ತು ಹೆಚ್ಚಿಸಲು ಪ್ರೋತ್ಸಾಹ.

**ನೀರಾವರಿ**

- 39 ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ.
- ನೀರಾವರಿ ಕಾಮಗಾರಿಗಳ ಬಜೆಟ್ ಅನುದಾನ ಶೇ.44 ರಷ್ಟು ಹೆಚ್ಚಳ.
- ಹನಿ ನೀರಾವರಿಗೆ ಶೇ.75 ರಷ್ಟು ಸಹಾಯಧನ ಮತ್ತು ರಾಜ್ಯದಾದ್ಯಂತ ಈ ಸೌಲಭ್ಯ ವಿಸ್ತರಣೆ.

**ಅಲ್ಪಸಂಖ್ಯಾತರ ಕಲ್ಯಾಣ**

- ದುರ್ಬಲ ವರ್ಗದ ಏಳಿಗೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚಿನ ಬಜೆಟ್ ಬೆಂಬಲ.
- ಗಂಗಾ ಕಲ್ಯಾಣ ಯೋಜನೆಯ ಘಟಕ ವೆಚ್ಚದಲ್ಲಿ ಏರಿಕೆ.
- ಪರಿಶಿಷ್ಟ ವರ್ಗದ ಕಲ್ಯಾಣಕ್ಕೆ ಪ್ರತ್ಯೇಕ ಅಭಿವೃದ್ಧಿ ನಿಗಮ.
- ಅಂಬೇಡ್ಕರ್ ಅಭಿವೃದ್ಧಿ ನಿಗಮ, ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅನುದಾನದಲ್ಲಿ ಗಣನೀಯ ಏರಿಕೆ.
- ಆಶ್ರಯ ಯೋಜನೆಯಡಿ ಘಟಕ ವೆಚ್ಚದಲ್ಲಿ ಏರಿಕೆ.

**ಹಿಂದುಳಿದ ವರ್ಗಗಳ ಕಲ್ಯಾಣ**

- ದುರ್ಬಲ ವರ್ಗಗಳ ಮಕ್ಕಳ ವಿದ್ಯಾಭ್ಯಾಸಕ್ಕೆ 110 ಹಾಸ್ಟೆಲ್ ಮಂಜೂರು.

**ಮೀನುಗಾರಿಕೆ**

- ಮೀನುಗಾರರಿಗೆ ನೀಡುವ ರಿಯಾಯ್ತಿ ದರದ ಡೀಸಲ್ ಪ್ರಮಾಣದಲ್ಲಿ ಹೆಚ್ಚಳ.

**ಕಾರ್ಮಿಕರ ಕಲ್ಯಾಣ**

- ನಿರ್ಮಾಣ ಕ್ಷೇತ್ರದ ಕಾರ್ಮಿಕರ ಕಲ್ಯಾಣಕ್ಕೆ ಕಾಯ್ದೆ.
- 104 ಸರ್ಕಾರಿ ಐಟಿಐಗಳ ಆಧುನೀಕರಣ ಮತ್ತು 32 ಹೊಸ ಶಾಖೆಗಳ ಆರಂಭ.

**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ**

- ಆರು ನೂತನ ವೈದ್ಯಕೀಯ ಕಾಲೇಜುಗಳನ್ನು ಪೂರ್ಣಗೊಳಿಸುವುದು.

**ಸಾರಿಗೆ**

- ವಿದ್ಯಾರ್ಥಿಗಳಿಗೆ ರಿಯಾಯಿತಿ ದರದ ಬಸ್ ಪಾಸ್ ಸೌಲಭ್ಯ.
- ಸ್ವಾತಂತ್ರ ಯೋಧರಿಗೆ ಲಕ್ಸುರಿ ಬಸ್ ಪಾಸ್ ಸೌಲಭ್ಯ.

**ಲೋಕೋಪಯೋಗಿ**

- ರೂ. 2,382 ಕೋಟಿ ಅನುದಾನ ಹಂಚಿಕೆ.
- ರಸ್ತೆಗಳ ದುರಸ್ತಿ ಹಾಗೂ ನಿರ್ವಹಣೆಗೆ ರೂ. 607 ಕೋಟಿ.

**ಪ್ರವಾಸೋದ್ಯಮ**

- ಪ್ರವಾಸೋದ್ಯಮ ಅಭಿವೃದ್ಧಿಗೆ ಬಜೆಟ್‌ನಲ್ಲಿ ರೂ. 40 ಕೋಟಿ ಬೆಂಬಲ.

**ಚಲನಚಿತ್ರ**

- ವಾರ್ಷಿಕ 20 ಚಿತ್ರಗಳಿಗೆ ಬದಲಾಗಿ 30 ಉತ್ತಮ ಚಿತ್ರಗಳಿಗೆ ತಲಾ 10 ಲಕ್ಷ ರೂ.ಗಳ ಸಹಾಯ ಧನ.

## ವಾಣಿಜ್ಯ ಮತ್ತು ಕೈಗಾರಿಕೆ

- ಶೀಘ್ರದಲ್ಲೆ ಹೊಸ ಕೈಗಾರಿಕಾ ನೀತಿಯ ಘೋಷಣೆ.
- ಕೈಗಾರಿಕಾ ಬಂಡವಾಳ ಹೂಡಿಕೆಗೆ ಸಹಾಯಧನ.
- ಹಿಂದುಳಿದ ಪ್ರದೇಶಗಳಲ್ಲಿ 25 ಕೈಗಾರಿಕಾ ಸಮುಚ್ಚಯಗಳ ಸ್ಥಾಪನೆ.
- ಖಾದಿ ಮತ್ತು ಗುಡಿ ಕೈಗಾರಿಕೆಗಳ ಆಧುನೀಕರಣ.
- ಮೆಕ್ಕೆಜೋಳದ ರಫ್ತಿಗೆ ಉತ್ತೇಜನ.

## ರೇಷ್ಮೆ ಮತ್ತು ಜವಳಿ

- ರೇಷ್ಮೆ ಉತ್ಪಾದನೆ ಮತ್ತು ಹೆಚ್ಚಿನ ಇಳುವರಿಗೆ ನೆರವು ನೀಡಲು 20.75 ಕೋಟಿ ಹಂಚಿಕೆ.
- "ರೇಷ್ಮೆ ವರದಾನ ಯೋಜನೆ".

## ನೇಕಾರರ ಪ್ಯಾಕೇಜ್

- 10 ಹೆಚ್‌ಪಿಯಿಂದ 20 ಹೆಚ್‌ಪಿವರೆಗಿನ ವಿದ್ಯುತ್ ಮಗ್ಗಗಳಿಗೆ ಸಹಾಯಧನ.
- ಜವಳಿ ಪಾರ್ಕ್‌ಗಳ ಸ್ಥಾಪನೆ.

## ನಗರಾಭಿವೃದ್ಧಿ

- ನಗರ ಮೂಲಸೌಕರ್ಯ ಸೇವೆಗಳಿಗೆ 682 ಕೋಟಿ ಹಾಗೂ ಬಡಜನರ ಮೂಲ ಅಗತ್ಯ ಸೇವೆಗಳಿಗೆ 48 ಕೋಟಿ.
- ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲ ಸೌಕರ್ಯಗಳ ಅಭಿವೃದ್ಧಿಗೆ 45 ಕೋಟಿ.
- ಬೆಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಿಗೆ ಕಾವೇರಿ 4ನೇ ಹಂತದ ಕಾಮಗಾರಿಗೆ 3384 ಕೋಟಿ.

L ಬೆಂಗಳೂರು ವಾಹನ ನಿಲ್ದಾಣಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಯೋಜಿತ ವಾಹನ ನಿಲ್ದಾಣ ನಿರ್ವಹಣೆ.

**ಮೂಲ ಸೌಕರ್ಯ**

L ಉತ್ತಮ ಮೂಲಸೌಕರ್ಯ ಕಲ್ಪಿಸಲು ಕೆಯುಡಿಸಿಇಎಮ್‌ಪಿ ಯೋಜನೆಯಡಿ ಕರಾವಳಿ ಪ್ರದೇಶದ 10 ಪಟ್ಟಣಗಳಲ್ಲಿ ಅಂದಾಜು 937 ಕೋಟಿ ರೂ.ಗಳ ವೆಚ್ಚದಲ್ಲಿ ಹಾಗೂ ಎಡಿಬಿ ಯೋಜನೆಯ ಮೂಲಕ ಉತ್ತರ ಕರ್ನಾಟಕದ 25 ನಗರಗಳಲ್ಲಿ 1800 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಮೂಲ ಸೌಕರ್ಯ ಕಲ್ಪಿಸುವ ಯೋಜನೆ ಪ್ರಗತಿಯಲ್ಲಿದೆ.

L 2006-07 ನೇ ಸಾಲಿನಲ್ಲಿ 15 ನೀರು ಪೂರೈಕೆ ಯೋಜನೆಗಳು ಮತ್ತು 7 ಯುಜಿಡಿ ಯೋಜನೆಗಳ ಕಾರ್ಯಾರಂಭ.

L ಮಾರುಕಟ್ಟೆ ದರದಲ್ಲಿ ಮೌಲ್ಯಮಾಪನೆ ಮಾಡಲು ಭೂ ಬ್ಯಾಂಕ್ ಅಥವಾ ಆವರ್ತ ನಿಧಿ ಸ್ಥಾಪನೆ.

L ಮೆಟ್ರೋ ರೈಲು ಯೋಜನೆಗೆ ಚಾಲನೆ.

L ವಿಮಾನ ನಿಲ್ದಾಣದ ಮೂಲ ಸೌಲಭ್ಯ ಯೋಜನೆಗಳಿಗೆ ಆರ್ಥಿಕ ಸಹಾಯ.

**ಮಾಹಿತಿ ತಂತ್ರಜ್ಞಾನ**

L ಗ್ರಾಮೀಣ ಪ್ರದೇಶಗಳಿಗೂ ಇ-ಆಡಳಿತ ಜಾಲ ವ್ಯವಸ್ಥೆ ಜಾರಿ.

**ಇಂಧನ**

L ಉತ್ತರ ಕನ್ನಡದ ತದ್ರಿ ಗ್ರಾಮದಲ್ಲಿ ನಾಲ್ಕು ಸಾವಿರ ಮೆಗಾವ್ಯಾಟ್ ವಿದ್ಯುತ್ ಯೋಜನೆ.

L 3000 ಗ್ರಾಮೀಣ ಫೀಡರ್‌ಗಳನ್ನು ಪುನರ್ ನವೀಕರಿಸಲಾಗುವುದು.

- ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿಯ 82 ಕೋಟಿ ರೂಗಳ ಬಾಕಿ ಮನ್ನಾ.
- ರೈತರು ಪಂಪ್‌ಸೆಟ್‌ಗೆ ಮೀಟರ್ ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಟ್ಟು ಕನಿಷ್ಟ ಶುಲ್ಕ ಪಾವತಿಗೆ ಕ್ರಮ.
- ನಿಗದಿತ ದಿನಾಂಕಕ್ಕೆ ಮುಂಚೆ ಪಾವತಿಸುವ ಗ್ರಾಮ ಪಂಚಾಯತ್‌ಗಳಿಗೆ ಶೇ. 25 ರಷ್ಟು ಸಹಾಯಧನ.
- ಕೃಷಿ ಪಂಪ್‌ಸೆಟ್ ಬಳಸುವ ವಿದ್ಯುತ್‌ಗೆ 1800 ಕೋಟಿ ಸಹಾಯಧನ.

ಮೌಲ್ಯವರ್ಧಿತ  ತೆರಿಗೆ:

- ಭತ್ತ, ಅಕ್ಕಿ, ಗೋಧಿ, ಬೇಳೆಗಳು, ಅಕ್ಕಿ ಮತ್ತು ಗೋಧಿಯ ಹಿಟ್ಟು ಮತ್ತು ರವೆ,  ಗೋಧಿ ಮೈದಾ ಮೇಲೆ ಇನ್ನೂ 6 ತಿಂಗಳ ಅವಧಿಗೆ ತೆರಿಗೆ ವಿನಾಯಿತಿ.
- ಎತ್ತಿನ ಲಾಳಗಳು,  ಎತ್ತಿನ ಗಾಡಿಯ ಬಿಡಿಭಾಗಗಳು ಮತ್ತು  ಬೇಳೆ ಚುನ್ನಿ ಮೇಲೆ ತೆರಿಗೆ ವಿನಾಯಿತಿ.
- ಜೋಳದ ಅವಲಕ್ಕಿ, ಒಣಮೆಣಸಿನಕಾಯಿಯ ಚೂರು ಮತ್ತು ಬೀಜಗಳು, ಕೈಯಿಂದ ಮಾಡಿದ ಸಾಬೂನು, ಸರ್ಜಿಕಲ್ ಗ್ಲೌವ್ಸ್, ಎಲ್ಲಾ ಸಿ.ಡಿ.ಗಳು, ಕೋಲ್ಡ್ ಟಾರು, ಕೆಲ ಪರೀಕ್ಷಣಾ ಮತ್ತು ಅಳತೆ ಉಪಕರಣಗಳು ಮತ್ತು ಕೆಲ ಕ್ಯಾಂಟೀನ್ ಸ್ಟೋರ್ಸ್ ಸರಕುಗಳ ಮೇಲಿನ ತೆರಿಗೆಯಲ್ಲಿ ಶೇ.12.5 ರಿಂದ ಶೇ.4ಕ್ಕೆ ಇಳಿತ.
- ಕಚ್ಚಾ ವಸ್ತುಗಳು ಮತ್ತು ಬಂಡವಾಳು ಸರಕುಗಳ ಪಟ್ಟಿಗೆ ಸೇರಿಕೆ.
- ಮಾಹಿತಿ ತಂತ್ರಜ್ಞಾನ ಸರಕುಗಳ ಪಟ್ಟಿಯ ಪರಿಷ್ಕರಣೆ.
- ಬಂಡವಾಳ ಸರಕುಗಳ ಮೇಲಿ ವಾರ್ಷಿಕ ರಿಬೇಟ್ ಬದಲಾಗಿ ಮಾಸಿಕ ರಿಬೇಟ್.

- ಬೇಕರಿಗಳಿಗೆ ಮತ್ತು ಎಲ್ಲಾ ಕಲ್ಲು ಪುಡಿ ಮಾಡುವ ಘಟಕಗಳಿಗೆ ರಾಜಿ ತೆರಿಗೆ ಸೌಲಭ್ಯ
- ರಾಜಿ ತೆರಿಗೆ ಸೌಲಭ್ಯದಲ್ಲಿರುವ ಗುತ್ತಿಗೆದಾರರಿಗೆ ಹೊರರಾಜ್ಯದಿಂದ ಖರೀದಿಸಲು ಅನುಮತಿ.
- ಮುಖ್ಯ ಗುತ್ತಿಗೆದಾರರಿಗೆ ಉಪ ಗುತ್ತಿಗೆದಾರರ ವಹಿವಾಟಿನ ಮೇಲೆ ವಿನಾಯಿತಿ.
- ವ್ಯಾಪಾರಿಗಳ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಮರುಪಾವತಿ.
- ಎರಡು ಆಂತರಿಕ ತನಿಖಾಠಾಣೆಗಳ ರದ್ದು.
- ಗುತ್ತಿಗೆ ಕಾಮಗಾರಿಗಳ ಅನುಸೂಚಿಯ ಸೇರಿಕೆ.
- ರಿಬೇಟ್ ನಿರ್ಬಂಧಿತ ಪಟ್ಟಿಯಲ್ಲಿ ನಾಫ್ತಾದ ಸೇರಿಕೆ.
- ದಂಡಗಳ ಪರಿಷ್ಕರಣೆ.

**ಮಾರಾಟ ತೆರಿಗೆ**

- ಓ.ಎನ್.ಜಿ.ಸಿ.ಗೆ ಮರು ಮಾರಾಟ ತೆರಿಗೆ ವಿನಾಯಿತಿ.
- ಬಾಕಿ ಇರುವ ಪ್ರಕರಣಗಳಲ್ಲಿ ವಾರ್ಷಿಕ ಪಟ್ಟಿಗಳನ್ನು ಒಪ್ಪಿಕೊಳ್ಳುವ ಯೋಜನೆ.

**ಪ್ರವೇಶ ತೆರಿಗೆ**

- ಬೀಡಿ ಎಲೆಗಳು, ರಬ್ಬರ್ ಟೈರುಗಳು ಮತ್ತು ಟ್ಯೂಬ್‌ಗಳು ಮತ್ತು ರಫ್ತು ಮಾಡುವ ಸರಕುಗಳಲ್ಲಿ ಉಪಯೋಗಿಸಿದ ಕಚ್ಚಾ ತೈಲಕ್ಕೆ ತೆರಿಗೆ ವಿನಾಯಿತಿ.

ವಿಶೇಷ ಪ್ರವೇಶ ತೆರಿಗೆ

- L ಮತ್ತಷ್ಟು ಸರಕುಗಳ ಮೇಲೆ ತೆರಿಗೆ.

ಕೃಷಿ ವರಮಾನ ತೆರಿಗೆ:

- L ಫರ್ಮ್‌ಗಳು ಮತ್ತು ಕಂಪನಿಗಳನ್ನು ಹೊರತುಪಡಿಸಿ ಮಿಕ್ಕೆಲ್ಲ ಬೆಳೆಗಾರರಿಗೆ ತೆರಿಗೆ ವಿನಾಯಿತಿ.
- L ಫರ್ಮ್‌ಗಳ ಮೇಲಿನ ತೆರಿಗೆ ಶೇ.30ಕ್ಕೆ ಮತ್ತು ಕಂಪನಿಗಳ ಮೇಲಿನ ತೆರಿಗೆ ಶೇ.35ಕ್ಕೆ ಇಳಿತ.

ಮನರಂಜನಾ ತೆರಿಗೆ

- L ಮ್ಯಾಜಿಕ್ ಶೋಗಳು ಮತ್ತು ಕ್ರೀಡೆಗಳಿಗೆ ತೆರಿಗೆ ವಿನಾಯಿತಿ.
- L ರಾಜಿ ದಂಡದಲ್ಲಿ ಇಳಿತ.
- L ಮಲ್ಟಿ ಸಿಸ್ಟಂ ಆಪರೇಟರುಗಳ ಮೇಲೆ ತೆರಿಗೆ ಮತ್ತು ಕೇಬಲ್ ಆಪರೇಟರುಗಳಿಗೆ ವಿನಾಯಿತಿ.
- L ಮಲ್ಟಿ ಸಿಸ್ಟಂ ಆಪರೇಟರುಗಳಿಗೆ ಪೂರ್ವಾನ್ವಯವಾಗುವಂತೆ ತೆರಿಗೆ ವಿನಾಯಿತಿ.
- L ಸಿನಿಮೇತರ ಮನರಂಜನೆಗಳಿಗೆ ಸಮಾನ ಪ್ರವೇಶ ಶುಲ್ಕ ವಿನಾಯಿತಿ ಮಿತಿ.

ವೃತ್ತಿ ತೆರಿಗೆ

- L ವಿಮಾ ಏಜೆಂಟರುಗಳು ಮತ್ತು ಪಿಗ್ಮಿ ಏಜೆಂಟರುಗಳ ಬಗ್ಗೆ ತೆರಿಗೆ ಕಡಿತ ಅವಕಾಶ.
- L ಪರ್ಮಿಟ್‌ದಾರರ ಬದಲಾಗಿ ಸಾಗಾಣಿಕೆ ವಾಹನಗಳ ಮಾಲೀಕರ ಮೇಲೆ ತೆರಿಗೆ.

**ಮೌಲ್ಯವರ್ಧಿತ ತೆರಿಗೆ:**

**ಅಬಕಾರಿ**

- ಸಗಟು ಮಾರಾಟಗಾರರ ಪರವಾನಗಿಯ ರದ್ದಿಯಾತಿ.
- ಅಬಕಾರಿ ಶುಲ್ಕವನ್ನು ಪರಿಷ್ಕರಣೆ.
- ಕರ ಸಮಾಧಾನ ಯೋಜನೆಯ ವಿಸ್ತರಣೆ.

**ಮೋಟಾರು ವಾಹನ ತೆರಿಗೆ.**

- ಮಲ್ಟಿ ಆಕ್ಸಲ್ ಮತ್ತು ಆರ್ಟಿಕ್ಯುಲೇಟೆಡ್ ಸರಕು ವಾಹನಗಳ ತೆರಿಗೆ ದರ ಇಳಿಕೆ.
- ಸಾರ್ವಜನಿಕ ಸ್ವಾಮ್ಯದ ಉದ್ದಿಮೆ ಹಾಗೂ ರಾಷ್ಟ್ರೀಕೃತ ಬ್ಯಾಂಕುಗಳ ನೌಕರರ ಸಾರಿಗೇತರ ವಾಹನಗಳಿಗೆ ವಾರ್ಷಿಕ ತೆರಿಗೆ ಪಾವತಿ ಸೌಲಭ್ಯ ವಿಸ್ತರಣೆ.

**ನೋಂದಣಿ ಮತ್ತು ಮುದ್ರಾಂಕ**

- ನೋಂದಣಿ ಶುಲ್ಕ ಇನ್ನೂ ಶೇ. 0.5 ಕ್ಕೆ ಇಳಿಕೆ.
- ಸ್ಥಿರಾಸ್ತಿಯ ಮಾರುಕಟ್ಟೆ ಮೌಲ್ಯದ ಪರಿಷ್ಕರಣೆ.

ಕರ್ನಾಟಕ ಸರ್ಕಾರ

# ಕರ್ನಾಟಕ ಆಯವ್ಯಯ

# 2006 ~ 2007

# ಮುಖ್ಯಾಂಶಗಳು